**ಕರ್ನಾಟಕ ಸರ್ಕಾರ**
**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ**

ಆಯುಕ್ತರವರ ಕಛೇರಿ, ಗ್ರಾ.ಕು.ನೀ.&ನೈ.ಇ., 2ನೇ ಮಹಡಿ, "ಇ" ಬ್ಲಾಕ್, ಕೆಹೆಚ್‌ಬಿ ಕಟ್ಟಡ, ಕಾವೇರಿ ಭವನ, ಕೆ.ಜಿ. ರಸ್ತೆ,
ಬೆಂಗಳೂರು – 560 009. ☎ : 080-22240508 📠 : 22240509 ಈ-ಮೇಲ್: krwssd@gmail.com

ನಂ.ಗ್ರಾಕುನೀ&ನೈಇ/05/ಲೆಕ್ಕ/2019 ದಿನಾಂಕ: 29-06-2019

## ಅಧಿಕೃತ ಜ್ಞಾಪನ

ವಿಷಯ: ತುರ್ತು ಕುಡಿಯುವ ನೀರಿನ ಪೂರೈಕೆಗಾಗಿ NRDWP ಟಾಸ್ಕ್‌ಫೋರ್ಸ್ ಅಡಿಯಲ್ಲಿ ಅನುದಾನ ಬಿಡುಗಡೆ ಮಾಡುವ ಕುರಿತು.

ಉಲ್ಲೇಖ:
1. ಸಚಿವ ಸಂಪುಟ ಉಪ ಸಮಿತಿಯ ನಡವಳಿ ದಿನಾಂಕ:12.12.2018.
2. ಸಚಿವ ಸಂಪುಟ ಉಪ ಸಮಿತಿಯ ನಡವಳಿ ದಿನಾಂಕ:26.12.2018.
3. ಗ್ರಾಅಪ/42/ಗ್ರಾನೀಸ(3)2018, ಬೆಂಗಳೂರು, ದಿನಾಂಕ:31-12-2018.
4. ಗ್ರಾಅಪ/34/ಗ್ರಾಕುನೀ&ನೈಇ/2018-19, ಬೆಂಗಳೂರು, ದಿನಾಂಕ:08.03.2019.

****

ರಾಜ್ಯದಲ್ಲಿನ 100 ಮತ್ತು 62 ಒಟ್ಟಾರೆ 162ತಾಲ್ಲೂಕುಗಳು ಕ್ರಮವಾಗಿ ಉಲ್ಲೇಖ (1) ಮತ್ತು (2) ರಲ್ಲಿ ಬರಪೀಡಿತವೆಂದು ಘೋಷಿಸಲಾಗಿತ್ತು. ಅದರನ್ವಯ ಸದರಿ 100 ತಾಲ್ಲೂಕಿಗೆ ತಲಾ ರೂ.100.00ಲಕ್ಷಗಳಂತೆ, 62 ತಾಲೂಕುಗಳಿಗೆ ರೂ.50.00ಲಕ್ಷಗಳಂತೆ ಹಾಗೂ 14 ತಾಲೂಕುಗಳಿಗೆ ರೂ.25.00ಲಕ್ಷಗಳಂತೆ ಒಟ್ಟು ರೂ.13450.00ಲಕ್ಷಗಳಂತೆ ಅನುದಾನ ಬಿಡುಗಡೆ ಮಾಡಲು ತೀರ್ಮಾನಿಸಲಾತ್ತು. ಉಲ್ಲೇಖ (3) ರ ಆದೇಶದ ಹಂಚಿಕೆ ಮೇಲೆ ಮತ್ತು ವಿಭಾಗಗಳ ಕೋರಿಕೆಯಂತೆ ಅನುದಾನವನ್ನು ಈಗಾಗಲೇ ಬಿಡುಗಡೆ ಮಾಡಲಾಗುತ್ತಿದೆ.

ಉಲ್ಲೇಖ (4) ರ ಆದೇಶದಲ್ಲಿ 100 ತಾಲ್ಲೂಕಿಗೆ ತಲಾ ರೂ.50.00ಲಕ್ಷಗಳಂತೆ, 62 ತಾಲೂಕುಗಳಿಗೆ ರೂ.25.00ಲಕ್ಷಗಳಂತೆ ಹಾಗೂ 14 ತಾಲೂಕುಗಳಿಗೆ ರೂ.10.00ಲಕ್ಷಗಳಂತೆ ಒಟ್ಟು ರೂ.6699.00ಲಕ್ಷಗಳಂತೆ ಅನುದಾನ ಹಂಚಿಕೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಅಲ್ಲದೆ ವಿಭಾಗಗಳ ಕೋರಿಕೆಯಂತೆ ಅನುದಾನವನ್ನು ಈಗಾಗಲೇ ಬಿಡುಗಡೆ ಮಾಡಲಾಗುತ್ತಿದೆ.

ಪ್ರಸ್ತುತ ಉಲ್ಲೇಖ (3) ರ ಆದೇಶದ ಹಂಚಿಕೆ ಮೇಲೆ ವಿಭಾಗಗಳ ಕೋರಿಕೆಯಂತೆ ರೂ.382.52 ಲಕ್ಷಗಳನ್ನು ಹಾಗೂ ಉಲ್ಲೇಖ (4) ರ ಆದೇಶದ ಹಂಚಿಕೆ ಮೇಲೆ ವಿಭಾಗಗಳ ಕೋರಿಕೆಯಂತೆ ರೂ.587.50 ಲಕ್ಷಗಳನ್ನು ಒಟ್ಟು ರೂ.970.02 ಲಕ್ಷಗಳ ರಾಜ್ಯವಲಯದ ಅನುದಾನವನ್ನು ಲೆಕ್ಕ ಶೀರ್ಷಿಕೆ 4215-01-102-2-01 ಅಡಿ ಸಮಸ್ಯಾತ್ಮಕ ಗ್ರಾಮಗಳಲ್ಲಿ ತುರ್ತಾಗಿ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲು ಅಗತ್ಯವಿರುವ ತುರ್ತು ಕುಡಿಯುವ ನೀರಿನ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ರಾಜ್ಯದ ತಾಲ್ಲೂಕುಗಳಿಗೆ ಬಿಡುಗಡೆ ಮಾಡಬೇಕಾಗಿದೆ. ಆದ್ದರಿಂದ, ಈ ಆದೇಶ.

## ಆದೇಶ

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ತುರ್ತು ಕುಡಿಯುವ ನೀರು ಪೂರೈಸಲು ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿರುವಂತೆ 06 ಜಿಲ್ಲೆಗಳ 36 ತಾಲ್ಲೂಕುಗಳಿಗೆ ಸಾಮಾನ್ಯ ಲೆಕ್ಕ ಶೀರ್ಷಿಕೆ 4215-01-102-2-01-132 ಅಡಿ **ಒಟ್ಟು ರೂ.967.42 ಲಕ್ಷ, ಎಸ್.ಸಿ.ಪಿ** ಲೆಕ್ಕ ಶೀರ್ಷಿಕೆ

4215-01-102-2-01-422 ಅಡಿ **ಒಟ್ಟು ರೂ.2.50 ಲಕ್ಷ ಹಾಗೂ** ಟಿ.ಎಸ್.ಪಿ ಲೆಕ್ಕ ಶೀರ್ಷಿಕೆ 4215-01-102-2-01-423 ಅಡಿ **ಒಟ್ಟು ರೂ.0.10 ಲಕ್ಷಗಳು ಒಟ್ಟು ರೂ.970.02 ಲಕ್ಷಗಳ ರಾಜ್ಯವಲಯದ ಅನುದಾನವನ್ನು ತುರ್ತು ಕುಡಿಯುವ ನೀರಿನ ಘಟಕದಡಿ** ತಾಲ್ಲೂಕುವಾರು ಅನುಬಂಧದಲ್ಲಿರುವಂತೆ ಬಿಡುಗಡೆ ಮಾಡಲು ಸರ್ಕಾರವು ಹರ್ಷಿಸುತ್ತದೆ.

2. ಈ ಆದೇಶದಲ್ಲಿ General ಅಡಿ ಬಿಡುಗಡೆಯಾದ ಅನುದಾನವನ್ನು ಲೆಕ್ಕ ಶೀರ್ಷಿಕೆ 2215-01-102-9-08-132 ಅಡಿ, SCP ಅಡಿ ಬಿಡುಗಡೆಯಾದ ಅನುದಾನವನ್ನು ಲೆಕ್ಕ ಶೀರ್ಷಿಕೆ 2215-01-102-9-08-422 ಹಾಗೂ TSP ಅಡಿ ಬಿಡುಗಡೆಯಾದ ಅನುದಾನವನ್ನು ಲೆಕ್ಕ ಶೀರ್ಷಿಕೆ 2215-01-102-9-08-423 ಅಡಿ Payees Receipt ಮೇಲೆ ಖಜಾನೆಯಿಂದ ತೆಗೆದು ಕೇಂದ್ರ ಸರ್ಕಾರಕ್ಕೆ ಅಧಿಕೃತವಾಗಿ ಘೋಷಿಸಿರುವ ಸಿಂಡಿಕೇಟ್ ಬ್ಯಾಂಕ್ ಉಳಿತಾಯ ಖಾತೆ ಸಂಖ್ಯೆ: 04462010091577ಗೆ ರಾಜ್ಯದ ಪಾಲಾಗಿ ಜಮೆ ಮಾಡಲಾಗಿದೆ. ಸದರಿ ಅನುದಾನವನ್ನು ಆಯಾಯ ಲೆಕ್ಕ ಲೆಕ್ಕ ಶೀರ್ಷಿಕೆಅಡಿ ವೆಚ್ಚ ಭರಿಸತಕ್ಕದ್ದು.

3. ಈ ಆದೇಶದಲ್ಲಿ ಬಿಡುಗಡೆಯಾದ ಅನುದಾನವು ಕೆಳಕಂಡ ನಿಬಂಧನೆಗೊಳಪಟ್ಟಿರುತ್ತದೆ:

XIII. ಕಾಮಗಾರಿಗಳ ಯಶಸ್ವಿ ಅನುಷ್ಠಾನಕ್ಕಾಗಿ ಈಗಾಗಲೇ ಹೊರಡಿಸಿರುವ ಸುತ್ತೋಲೆ ಸಂ:RDP/RWS/CE/TA-5/34/2018-19 ದಿನಾಂಕ:16.10.2018ರ ನಿಬಂಧನೆಗಳು ಕಡ್ಡಾಯವಾಗಿ ಅನ್ವಯವಾಗುತ್ತವೆ.

XIV. ತೀರ್ವ ಅನಿವಾರ್ಯವಿದ್ದಲ್ಲಿ ಮಾತ್ರ ಭೂವಿಜ್ಞಾನಿಗಳ ಸಲಹೆ ಮೇರೆಗೆ ಹೊಸ ಬೋರ್‌ವೆಲ್‌ಗಳನ್ನು ಕೊರೆಸಿ ಸದರಿ ಬೋರ್‌ವೆಲ್‌ಗಳು ಸಾರ್ವಜನಿಕ ಉಪಯೋಗಕ್ಕೆ ಲಭ್ಯವಾಗುವಂತೆ ನೋಡಿಕೊಳ್ಳತಕ್ಕದ್ದು.

XV. ಹೊಸ ಕೊಳವೆ ಬಾವಿಗಳನ್ನು ಕೊರೆಯುವ ಮುನ್ನ ಅದರ ಸ್ಥಳ ಮತ್ತು ಗುರುತಿಗಾಗಿ ಜಿ.ಪಿ.ಎಸ್. ಸಿಸ್ಟಂ ಮುಖೇನ ಅಧಿಕೃತ ದಾಖಲೆ ಮಾಡುವುದರೊಂದಿಗೆ ಅದರ ಛಾಯಾಚಿತ್ರವನ್ನು ಕಾಮಗಾರಿಗೆ ಮುನ್ನ ಹಾಗೂ ನಂತರ ತೆಗೆದು ಗಾಂಧಿ ಸಾಕ್ಷಿ ಕಾಯಕದಲ್ಲಿ ದಾಖಲಿಸುವುದು. ಸಂಬಂಧಪಟ್ಟ ಸ್ಥಳೀಯ ಹಿರಿಯ ಅಧಿಕಾರಿ ಈ ಪ್ರಕ್ರಿಯೆಯನ್ನು ದೃಢೀಕರಿಸತಕ್ಕದ್ದು. ಬಿಲ್ಲುಗಳ ವಿವರವನ್ನು ಗಾಂಧಿಸಾಕ್ಷಿ ಕಾಯಕದಲ್ಲಿ ನಮೂದಿಸಿರುವುದನ್ನು ಖಾತ್ರಿಪಡಿಸಿಕೊಂಡು ತದನಂತರ ಬಿಲ್ಲುಗಳನ್ನು ಪಾವತಿಸಬೇಕು.

XVI. ಕ್ರಿಯಾ ಯೋಜನೆಯನ್ನು ಆಯಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಟಾಸ್ಕ್‌ಫೋರ್ಸ್ ನಿಯಾಮವಳಿಯಂತೆ ಅನುಮೋದಿಸತಕ್ಕದ್ದು. ಈಗ ಒದಗಿಸಿರುವ ಅನುದಾನದ ಮಿತಿಯೊಳಗೆ ತುರ್ತು ಕಾಮಗಾರಿಗಳನ್ನು ಸ್ಥಳೀಯ ಆಗತ್ಯತೆ ಆಧರಿಸಿ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆಯ ಮುಖೇನ ಅನುಷ್ಠಾನಗೊಳಿಸಬೇಕು.

4. ಈ ಆದೇಶದಲ್ಲಿ ಬಿಡುಗಡೆಯಾದ ಅನುದಾನವನ್ನು ಉಪಯೋಗಿಸುವಾಗ ಕರ್ನಾಟಕ ಪಾರದರ್ಶಕ ಕಾಯ್ದೆ-1999 ಮತ್ತು ಕರ್ನಾಟಕ ಪಾರದರ್ಶಕ ನಿಯಮಗಳು-2000, ಕರ್ನಾಟಕ ಆರ್ಥಿಕ ಸಂಹಿತೆ-1958, ಕರ್ನಾಟಕ ಖಜಾನೆ ಸಂಹಿತೆ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, ಪಿಡಬ್ಲ್ಯೂಡಿ "ಎ" ಕೋಡ್ ಮತ್ತು "ಡಿ" ಕೋಡ್ ಹಾಗೂ ಚಾಲ್ತಿ ಇರುವ ಇಲಾಖಾ ಇತರೆ ಸುತ್ತೋಲೆ, ಆದೇಶ ಹಾಗೂ ನಿಯಮಗಳು / ಕಾಯ್ದೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

5. ಈ ಆದೇಶದಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು ಯಾವುದೇ ಕಾರಣದಲ್ಲೂ ಇತರೆ ಘಟಕದಡಿ ವರ್ಗಾಯಿಸಿ ಉಪಯೋಗಿಸಿಕೊಳ್ಳದಂತೆ ಕ್ರಮ ವಹಿಸತಕ್ಕದ್ದು. ಕಾಮಗಾರಿಗಳ ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮೇಲುಸ್ತುವಾರಿ ಮಾಡಿ ವರದಿ ಮಾಡತಕ್ಕದ್ದು.

6. ಈ ಆದೇಶದಲ್ಲಿ ಬಿಡುಗಡೆಯಾದ ಅನುದಾನವನ್ನು RTGS ಮುಖೇನ ಈಗಾಗಲೇ ಕೇಂದ್ರ ಸರ್ಕಾರಕ್ಕೆ ಅಧಿಕೃತವಾಗಿ ಘೋಷಿಸಿರುವ ಸಿಂಡಿಕೇಟ್ ಬ್ಯಾಂಕ್ ಉಳಿತಾಯ ಖಾತೆ ಸಂಖ್ಯೆ: 04462010091577 ಮುಖಾಂತರ ವಿನಿಯೋಗಿಸತಕ್ಕದ್ದು.

7. ಈ ಆದೇಶದಲ್ಲಿ ಬಿಡುಗಡೆಯಾದ ರಾಜ್ಯ ವಲಯದ ಅನುದಾನವನ್ನು ಲೆಕ್ಕ ಶೀರ್ಷಿಕೆ 4215-01-102-1-02 – 132 ಸಾಮಾನ್ಯ ಅಡಿ ಗಣನೆಗೆ ತೆಗೆದುಕೊಂಡು, ಆರ್.ಟಿ.ಜಿ.ಎಸ್. ಮುಖೇನ ಅನುಬಂಧದಲ್ಲಿ ತೋರಿಸಿರುವಂತೆ ಜಿಲ್ಲಾ ಪಂಚಾಯತ್‌ಗಳು ಕಳುಹಿಸುವ ಬಿಲ್ಲುಗಳನ್ನು ಮಾನ್ಯ ಮಾಡಿ ವಿನಿಯೋಗಿಸತಕ್ಕದ್ದು.

8. ಕಾಮಗಾರಿವಾರು ವೆಚ್ಚಭರಿಸುವಾಗ SC/ST concentrated habitation ಗಳಿದ್ದರೆ ಪೂರ್ಣ ವೆಚ್ಚವನ್ನು ಎಸ್.ಸಿ.ಪಿ/ಟಿ.ಎಸ್.ಪಿ ಅಡಿ ತೋರಿಸುವುದು. ಇತರೆ ಸಂದರ್ಭಗಳಲ್ಲಿ ಜನಸಂಖ್ಯೆಗನುಣವಾಗಿ ಸಾಮಾನ್ಯ/ ಎಸ್.ಸಿ.ಪಿ/ಟಿ.ಎಸ್.ಪಿ ಗಳಿಗೆ ವೆಚ್ಚ ತೋರಿಸುವುದು.

9. ಈ ಆದೇಶದಲ್ಲಿ ಬಿಡುಗಡೆಯಾದ ಅನುದಾನದ ಈಗಾಗಲೇ ಸದರಿ ಘಟಕದಡಿ ಬಿಡುಗಡೆಯಾದ ಅನುದಾನದ ಹಣಬಳಕೆ ಪ್ರಮಾಣ ಪತ್ರವನ್ನು ಆಯುಕ್ತರು, ಗ್ರಾ.ಕು.ನೀ.&.ನೈ. ಇಲಾಖೆರವರಿಗೆ ಆಯಾ ಜಿಲ್ಲಾ ಪಂಚಾಯತ್ / ವಿಭಾಗಗಳವರು ಕಡ್ಡಾಯವಾಗಿ ಕಳುಹಿಸಿಕೊಡತಕ್ಕದ್ದು.

10. ಈ ಆದೇಶದಲ್ಲಿ ಬಿಡುಗಡೆಯಾದ ಅನುದಾನವನ್ನು ಯಾವ ಉದ್ದೇಶಗಳಿಗೆ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಗಳಿಗೆ ಬಳಸಿಕೊಳ್ಳತಕ್ಕದ್ದು.

29/06/19

ಆಯುಕ್ತರು

ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ

ಪ್ರತಿಗಳು:

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು-1) ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಎಯು-2) ಕರ್ನಾಟಕ, ಬೆಂಗಳೂರು.
4. ಉಪ ಮಹಾಲೇಖಪಾಲರು, ಮಹಾಲೇಖಪಾಲರು (ಎಯು-1) ರವರ ಶಾಖಾ ಕಛೇರಿ, ಕಾಲೇಜು ರಸ್ತೆ, ಧಾರವಾಡ.
5. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ,ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ / ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನಸೌಧ / ವಿಕಾಸಸೌಧ ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನಾ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು,
9. ಬೆಂಗಳೂರು. ವಿಶೇಷಾಧಿಕಾರಿ (ಜಿಪಂ) ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು-09
10. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ (6) (ಜಿಪಂ) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
11. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, 1ನೇ ಮಹಡಿ, ಕಾವೇರಿಭವನ, ಬೆಂ-09.
12. ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷರು.

13. ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು / ಮುಖ್ಯ ಲೆಕ್ಕಾಧಿಕಾರಿಗಳು.
14. ಸಂಬಂಧಿಸಿದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವೃತ್ತಗಳ ಅಧೀಕ್ಷಕ ಅಭಿಯಂತರರು.
15. ಸಂಬಂಧಪಟ್ಟ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳ ಕಾರ್ಯಪಾಲಕ ಇಂಜಿನಿಯರ್‌ಗಳು.
16. ಸಂಬಂಧಪಟ್ಟ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
17. ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ (ಪಂ.ರಾಜ್) ಇವರ ಆಪ್ತ ಕಾರ್ಯದರ್ಶಿಗಳು.
18. ಆಯುಕ್ತರು, RDWSD ಮತ್ತು ಪದನಿಮಿತ್ತ ಸರ್ಕಾರದ ಕಾರ್ಯದರ್ಶಿ / ಆಂತರಿಕ ಆರ್ಥಿಕ ಸಲಹೆಗಾರರು / ಇವರುಗಳ ಆಪ್ತ ಸಹಾಯಕರು.
19. ನಿರ್ದೇಶಕರು, ಶ್ರೀ ಅಬ್ದುಲ್ ನಜೀರ್‌ಸಾಬ್‌ರವರ ಗ್ರಾಮೀಣಾಭಿವೃದ್ಧಿ ರಾಜ್ಯ ಸಂಸ್ಥೆ, ಲಲಿತ್ ಮಹಲ್ ರಸ್ತೆ, ಮೈಸೂರು.
20. ಮ್ಯಾನೇಜರ್, ಸಿಂಡಿಕೇಟ್ ಬ್ಯಾಂಕ್, BWSSB ಬ್ರ್ಯಾಂಚ್, ರಾಜದ್ದೂತ್ ಕಾಂಪ್ಲೆಕ್ಸ್, ಅವೆನ್ಯೂ ರಸ್ತೆ, ಬೆಂಗಳೂರು.
21. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ" ಗ್ರಾಅಪಂ.ರಾಜ್ ಇಲಾಖೆ, ಬೆಂಗಳೂರು.
22. ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ ಮತ್ತು ನೈರ್ಮಲ್ಯ ಉಪ ವಿಭಾಗಗಳು.
23. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾಅಪಂ.ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು).
24. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ).
25. ಗ್ರಾಅಪಂ.ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು).
26. ಶಾಖಾ ರಕ್ಷಾ ಕಡತಃ ಹೆಚ್ಚುವರಿ ಪ್ರತಿಗಳು.

## ಅನುಬಂಧ

**ಅಧಿಕೃತ ಜ್ಞಾಪನ ಸಂಖ್ಯೆ: ಗ್ರಾಕುನೀ&ನೈಇ/05/ಲೆಕ್ಕ/2019, ಬೆಂಗಳೂರು, ದಿನಾಂಕ 29–06–2019 ರ ಲಗತ್ತು**

**ಲೆಕ್ಕ ಶೀರ್ಷಿಕೆ 4215–01–102–1–02, ತುರ್ತು ಕುಡಿಯುವ ನೀರಿನ ಘಟಕ (Task Force) ದಡಿ ಬಿಡುಗಡೆ ಮಾಡಲಾದ ರಾಜ್ಯವಲಯದ ಅನುದಾನ**

(ರೂ ಲಕ್ಷಗಳಲ್ಲಿ)

| ಕ್ರ ಸಂ | ಜಿಲ್ಲೆ / ವಿಭಾಗ | ತಾಲ್ಲೂಕು ಸಂಖ್ಯೆ | ತಾಲ್ಲೂಕು ಹೆಸರು | ಬಿಡುಗಡೆ ಮಾಡಲಾದ ಅನದಾನ | | | | ಘಟಕ |
|---|---|---|---|---|---|---|---|---|
| | | | | ಸಾಮಾನ್ಯ | ಎಸ್.ಸಿ.ಪಿ | ಟಿ.ಎಸ್.ಪಿ | ಒಟ್ಟು | |
| 1 | ಬೆಂಗಳೂರು ಗ್ರಾಮಾಂತರ | 1 | ದೇವನಹಳ್ಳಿ | 25.00 | 0.00 | 0.00 | **25.00** | Task Force-III (CEO's TF) |
| | | 2 | ದೊಡ್ಡಬಳ್ಳಾಪುರ | 25.00 | 0.00 | 0.00 | **25.00** | |
| | | 3 | ಹೊಸಕೋಟೆ | 25.00 | 0.00 | 0.00 | **25.00** | |
| | | 4 | ನೆಲಮಂಗಲ | 12.50 | 0.00 | 0.00 | **12.50** | |
| | | | **ಒಟ್ಟು** | **87.50** | 0.00 | 0.00 | **87.50** | |
| 2 | ಬೆಳಗಾಂ | 5 | ಬೈಲಹೊಂಗಲ | 12.50 | 0.00 | 0.00 | **12.50** | Task Force-III (CEO's TF) |
| | | 6 | ಬೆಳಗಾವಿ | 12.50 | 0.00 | 0.00 | **12.50** | |
| | | 7 | ಖಾನಾಪುರ | 12.50 | 0.00 | 0.00 | **12.50** | |
| | | 8 | ಪರಸ್‌ಗಡ(ಸವದತ್ತಿ) | 25.00 | 0.00 | 0.00 | **25.00** | |
| | | 9 | ರಾಮದುರ್ಗ | 25.00 | 0.00 | 0.00 | **25.00** | |
| | | | **ಒಟ್ಟು** | **87.50** | 0.00 | 0.00 | **87.50** | |
| 3 | ಬಿಜಾಪುರ | 10 | ಇಂಡಿ | 10.29 | 1.90 | 0.10 | **12.29** | Task Force-(I & II) |
| | | 11 | ಬಿಜಾಪುರ | 15.10 | 0.00 | 0.00 | **15.10** | |
| | | 12 | ಮುದ್ದೆಬಿಹಾಳ್ | 5.60 | 0.60 | 0.00 | **6.20** | |
| | | | **ಒಟ್ಟು** | **30.99** | **2.50** | **0.10** | **33.59** | |
| 4 | ದಾವಣಗೆರೆ | 13 | ಚನ್ನಗಿರಿ | 12.00 | 0.00 | 0.00 | **12.00** | Task Force (I & II) |
| | | 14 | ದಾವಣಗೆರೆ | 25.00 | 0.00 | 0.00 | **25.00** | |
| | | 15 | ಹರಪ್ಪನಹಳ್ಳಿ | 25.00 | 0.00 | 0.00 | **25.00** | |
| | | 16 | ಹರಿಹರ | 25.00 | 0.00 | 0.00 | **25.00** | |
| | | 17 | ಹೊನ್ನಾಳಿ | 12.00 | 0.00 | 0.00 | **12.00** | |
| | | 18 | ಜಗಳೂರು | 25.00 | 0.00 | 0.00 | **25.00** | |
| | | | **ಒಟ್ಟು** | **124.00** | 0.00 | 0.00 | **124.00** | |
| 5 | ಗುಲ್ಬರ್ಗ | 19 | ಅಫಜಲ್‌ಪುರ | 25.00 | 0.00 | 0.00 | **25.00** | Task Force-III (CEO's TF) |
| | | 20 | ಆಳಂದ | 12.50 | 0.00 | 0.00 | **12.50** | |
| | | 21 | ಚಿಂಚೋಳಿ | 25.00 | 0.00 | 0.00 | **25.00** | |
| | | 22 | ಚಿತ್ತಾಪುರ | 25.00 | 0.00 | 0.00 | **25.00** | |
| | | 23 | ಜೇವರ್ಗಿ | 25.00 | 0.00 | 0.00 | **25.00** | |
| | | 24 | ಕಲಬುರಗಿ | 25.00 | 0.00 | 0.00 | **25.00** | |
| | | 25 | ಸೇಡಂ | 25.00 | 0.00 | 0.00 | **25.00** | |
| | | | **ಒಟ್ಟು** | **162.50** | 0.00 | 0.00 | **162.50** | |

| ಕ್ರ. ಸಂ | ಜಿಲ್ಲೆ / ವಿಭಾಗ | ತಾಲ್ಲೂಕು ಸಂಖ್ಯೆ | ತಾಲ್ಲೂಕು ಹೆಸರು | ಬಿಡುಗಡೆ ಮಾಡಲಾದ ಅನದಾನ | | | | ಘಟಕ |
|---|---|---|---|---|---|---|---|---|
| | | | | ಸಾಮಾನ್ಯ | ಎಸ್.ಸಿ.ಪಿ | ಟಿ.ಎಸ್.ಪಿ | ಒಟ್ಟು | |
| 6 | ತುಮಕೂರು | 26 | ಚಿಕ್ಕನಾಯಕನಹಳ್ಳಿ | 25.00 | 0.00 | 0.00 | 25.00 | Task Force (I & II) |
| | | 27 | ಗುಬ್ಬಿ | 25.32 | 0.00 | 0.00 | 25.32 | |
| | | 28 | ಕೊರಟಗೆರೆ | 25.00 | 0.00 | 0.00 | 25.00 | |
| | | 29 | ಕುಣಿಗಲ್ | 25.00 | 0.00 | 0.00 | 25.00 | |
| | | 30 | ಮಧುಗಿರಿ | 25.10 | 0.00 | 0.00 | 25.10 | |
| | | 31 | ಸಿರಾ | 25.00 | 0.00 | 0.00 | 25.00 | |
| | | 32 | ತಿಪಟೂರು | 24.52 | 0.00 | 0.00 | 24.52 | |
| | | 33 | ತುಮಕೂರು | 25.00 | 0.00 | 0.00 | 25.00 | |
| | | 34 | ತುರುವೇಕೆರೆ | 24.99 | 0.00 | 0.00 | 24.99 | |
| | | | ಚಿಕ್ಕನಾಯಕನಹಳ್ಳಿ | 25.00 | 0.00 | 0.00 | 25.00 | Task Force-III (CEO's TF) |
| | | | ಗುಬ್ಬಿ | 25.00 | 0.00 | 0.00 | 25.00 | |
| | | | ಕೊರಟಗೆರೆ | 25.00 | 0.00 | 0.00 | 25.00 | |
| | | | ಕುಣಿಗಲ್ | 25.00 | 0.00 | 0.00 | 25.00 | |
| | | | ಮಧುಗಿರಿ | 25.00 | 0.00 | 0.00 | 25.00 | |
| | | 36 | ಪಾವಗಡ | 25.00 | 0.00 | 0.00 | 25.00 | |
| | | | ಸಿರಾ | 25.00 | 0.00 | 0.00 | 25.00 | |
| | | | ತಿಪಟೂರು | 25.00 | 0.00 | 0.00 | 25.00 | |
| | | | ತುಮಕೂರು | 25.00 | 0.00 | 0.00 | 25.00 | |
| | | | ತುರುವೇಕೆರೆ | 25.00 | 0.00 | 0.00 | 25.00 | |
| | | | ಒಟ್ಟು | 474.93 | 0.00 | 0.00 | 474.93 | |
| | ಒಟ್ಟಾರೆ | | | 967.42 | 2.50 | 0.10 | 970.02 | |

29/06/19

ಆಯುಕ್ತರು

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ.